ಶ್ರೀ ಬಿ. ಶಿವಣ್ಣ :– ಬೆಳಗಾಮ್‌ನಲ್ಲಿ ಮತ್ತು ರಾಯಚೂರಿನಲ್ಲಿ ಆ ಪದ್ಧತಿ ಏನು ಇದೆ, ಅದರ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರು ಅದಕ್ಕೆ ಮುಂದೆ ಡಿಸೆಂಬರ್ ತಿಂಗಳಿನಲ್ಲಿ, ಜನವರಿಯಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ. ನಾವು ಇದನ್ನು ತಡೆಗಟ್ಟಲು ಅಧಿಕಾರಿಗಳಿಗೆ ಸುತ್ತೋಲೆಯನ್ನು ಈಗಾಗಲೇ ಕಳುಹಿಸಿದ್ದೇವೆ.

ಶ್ರೀ ಜಿ. ರಾಜುಗೌಡ :– ಮಾನ್ಯ ಅಧ್ಯಕ್ಷರೇ ದೇವದಾಸಿಯರನ್ನು ಲಗ್ನವಾಗುವಂಥ ಸಂದರ್ಭದಲ್ಲಿ ಪರಿಹಾರಧನವಾಗಿ ಅವರಿಗೆ ಸರ್ಕಾರದವರು ಮೂರುಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ದಯವಿಟ್ಟು ಸರ್ಕಾರದವರು ಇದನ್ನು ಹೆಚ್ಚಸಲಿಕ್ಕೆ ಸಾಧ್ಯವಾಗುತ್ತದೆಯೇ. ಧಾರ್ಮಿಕ ಹಿನ್ನಲೆಯಲ್ಲಿ ಬೆಳೆದಿರತಕ್ಕಂಥ ಈ ಪದ್ಧತಿಯ ಶೋಷಕರೇನಿದ್ದಾರೆ, ಆ ಶೋಷಕರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳತ್ತೀರಾ? ಮತ್ತು ಆ ಮಧ್ಯವರ್ತಿಗಳನ್ನು ಬಲಿಹಾಕುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ :– ದೇವದಾಸಿಯರ ಜೊತೆಯಲ್ಲಿ ಯಾರಾದರೂ ಮದುವೆ ಮಾಡಿಕೊಂಡರೆ ಅವರಿಗೆ ಮೂರು ಸಾವಿರ ರೂಪಾಯಿಗಳನ್ನು ಪರಿಹಾರ ಕೊಡುವುದು ಸರ್ಕಾರದಲ್ಲಿದೆ.

ಶ್ರೀ ಪೌಕಲ್ ಎಂ. ಮಲ್ಲಪ್ಪ :– ಮಾನ್ಯ ಅಧ್ಯಕ್ಷೆಣಿಯವರೇ ನಾನು 491ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷೆಣಿಯವರೇ ಇದು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟದ್ದು. ಇದನ್ನು ಅವರಿಗೆ ಟ್ರಾನ್ಸಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡ :– ಮಾನ್ಯ ಸಚಿವರಿಗೆ ಯಾವಯಾವಖಾತೆಗೆ ಯಾರು ಯಾರು ಸಚಿವರು ಎನ್ನುವುದೇ ಗೊತ್ತಿಲ್ಲ. ಯಾವ ಪ್ರಶ್ನೆಯನ್ನು ಕೇಳಿದರೂ ನನಗೆ ಸಂಬಂಧಿಸಿದ್ದಲ್ಲವೆಂದು ಹೇಳುತ್ತಾರೆ.

ಶ್ರೀ ಪೌಕಲ್ ಎಂ. ಮಲ್ಲಪ್ಪ :– ಇದು ಸಮಾಜ ಕಲ್ಯಾಣ ಇಲಾಖೆಗೆ ಬರುತ್ತದೆ. ಅಂಗವಿಕಲರಿಗೆ ಸಂಬಂಧಪಟ್ಟದ್ದು..

ಉಪಾಧ್ಯಕ್ಷೆಣಿಯವರು :– ಈ ಪ್ರಶ್ನೆಯನ್ನು ಸಂಬಂಧಪಟ್ಟ ಇಲಾಖೆಗೆ ವರ್ಗಾಯಿಸಿರುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಬಗ್ಗೆ

613. ಶ್ರೀ ಬಿ.ಎಸ್.ಬನ್ನಿಕೋಡ್ (ಹಿರೇಕೆರೂರು) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಜನಾಂಗದ ಹಾಗೂ ಹಿಂದುಳಿದ ಪಂಗಡದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಪ್ರಸಾದ ನಿಲಯಗಳು ಮತ್ತು ವಸತಿನಿಲಯಗಳಲ್ಲಿ ಅವಶ್ಯವಿರುವ ನೌಕರರು ಇಲ್ಲದೆ ಇರುವುದರಿಂದ ದಿನಗೂಲಿ ನೌಕರರು ಕೆಲಸ ನಿರ್ವಹಿಸುವುದರಿಂದ ಅಲ್ಲಿನ ವ್ಯವಸ್ಥೆ ಹದಗೆಟ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಸದರಿ ವಸತಿನಿಲಯಗಳನ್ನು ಸುವ್ಯವಸ್ಥೆಯಿಂದ ನಡೆಸಲು ಈಗಾಗಲೇ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರನ್ನು ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

(ಇ) ಹಾಗಿದ್ದಲ್ಲಿ, ಖಾಯಂ ನೌಕರರನ್ನು ಭರ್ತಿ ಮಾಡಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ? ಹಾಗಿದ್ದಲ್ಲಿ ಜರುಗಿಸಿದ ಕ್ರಮವೇನು?

ಶ್ರೀ. ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):–

(ಅ) ಇಲ್ಲ

(ಆ) ಸರ್ಕಾರಿ ಆದೇಶ ಸಂಖ್ಯೆ. ಡಿಪಿಎಆರ್ 2 ಎಸ್.ಎಲ್.ಸಿ 90, ದಿನಾಂಕ 6–8–90ರಂತೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

(ಇ) ಖಾಯಂ ನೌಕರರನ್ನು ತುಂಬಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಮಾನ್ಯ ಅಧ್ಯಕ್ಷಣಿಯವರೇ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರು, ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸರ್ಕಾರಿ ನಿಲಯಗಳಲ್ಲಿ ಅಡುಗೆ ಮಾಡತಕ್ಕಂಥವರು ಇಲ್ಲ. ಅಲ್ಲಿ ಖರ್ಚುವೆಚ್ಚಗಳನ್ನು ನೋಡಿಕೊಳ್ಳತಕ್ಕಂಥ ವಾರ್ಡ್‌ನರ್‌ಗಳು ಇಲ್ಲ. ಅಲ್ಲಿ ದಿನಗೂಲಿಯಮೇಲೆ ಕೆಲಸಮಾಡುತ್ತಿದ್ದಂಥವರನ್ನು ತೆಗೆದುಹಾಕಿದ್ದಾರೆ. ಅಲ್ಲಿಗೆ ಖಾಯಮ್ ಆಗಿ ಕೆಲಸ ಮಾಡತಕ್ಕಂಥವರನ್ನೂ ಹಾಕಲಿಲ್ಲ, ದಿನಗೂಲಿಯಮೇಲೆ ಕೆಲಸ ಮಾಡತಕ್ಕಂಥವರನ್ನೂ ತೆಗೆದುಹಾಕಿರುವುದರಿಂದ ಈವತ್ತಿನ ದಿವಸ ವಿದ್ಯಾರ್ಥಿಗಳಿಗೆ ಊಟಕ್ಕೆ ತೊಂದರೆಯಾಗಿದೆ. ಇಂಥ ಒಂದು ಪರಿಸ್ಥಿತಿ ಅಲ್ಲಿ ಉಂಟಾಗಿರುವುದರಿಂದ ಈಗ ತತ್‌ಕ್ಷಣ ಏನು ಮಾಡುತ್ತೀರಾ? ಸರ್ಕಾರದವರು ಖಾಯಮ್ ಆಗಿ ನೌಕರರನ್ನು ತೆಗೆದುಕೊಳ್ಳಲು ಏನಾದರು ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ತಾತ್ಪೂರ್ತಿಕವಾಗಿ ಹಾಸ್ಟೆಲುಗಳಲ್ಲಿ ಕೆಲಸ ನಡೆಯುವುದಕ್ಕೆ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಮೊದಲು ಇದ್ದಂತಹ ದಿನಗೂಲಿ ನೌಕರರನ್ನು ಮುಂದುವರಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೆ?

ಶ್ರೀ ಬಿ. ಶಿವಣ್ಣ :– ಜಿಲ್ಲಾ ಪರಿಷತ್ತಿನಲ್ಲಿ ಕೆಲವು ಜನರಿಗೆ ಟೆಂಪರರಿ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. ಧಾರವಾಡ ಜಿಲ್ಲೆಯವರು ಸುಪ್ರೀಂಕೋರ್ಟಿಗೆ ಕೇಸ್ ಹಾಕಿದ ಕಾಲಕ್ಕೆ ಕೋರ್ಟ್ ಆರ್ಡರ್ ಮೇಲೆ ಟೆಂಪರರಿ ಬೇಸಿಸ್ ಮೇಲೆ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದವರನ್ನು ಖಾಯಂ ಮಾಡಲಾಗಿದೆ. ಈಗ ಹೊಸದಾಗಿ ಟೆಂಪರರಿ ರೆಕ್ರೂಟ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ. ಆದರೂ 599 ಜನರನ್ನು ಅಪಾಯಿಂಟ್‌ಮೆಂಟ್ ಮಾಡಬೇಕೆಂದು ಸರ್ಕಾರದ ಆದೇಶ ಇದೆ. ಹಾಸ್ಟೆಲ್‌ಗಳಲ್ಲಿ ಅಡಿಗೆ ಮತ್ತಿತರ ವ್ಯವಸ್ಥೆ ಮಾಡಿಸುವುದಕ್ಕೆ ಸರ್ಕಾರ ಸಿದ್ಧವಾಗಿದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಏನು ವ್ಯವಸ್ಥೆ ಮಾಡುತ್ತಿದ್ದೀರಿ ದಿನಗೂಲಿ ನೌಕರರನ್ನು ತೆಗೆದುಕೊಳ್ಳುವುದಕ್ಕೆ ಆಗದೆ ಇದ್ದರೆ ವಿದ್ಯಾರ್ಥಿಗಳಿಗೆ ಊಟದ ಅನುಕೂಲತೆ ಮಾಡುವುದಕ್ಕೆ, ಹಾಸ್ಟೆಲ್ ನಡೆಯುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸರ್ಕಾರೀ ಆಜ್ಞೆಯಂತೆ ಇದ್ದ ದಿನಗೂಲಿ ನೌಕರರನ್ನು ತೆಗೆದುಹಾಕಿದ್ದೀರಲ್ಲ ಅವರ ಜಾಗಕ್ಕೆ ಯಾರನ್ನು ತೆಗೆದುಕೊಂಡಿದ್ದೀರಿ? ಖಾಯಂ ನೌಕರರನ್ನು ತೆಗೆದುಕೊಳ್ಳುವವರೆಗೆ ಇದ್ದವರನ್ನು ಏತಕ್ಕೆ ಮುಂದುವರಿಸಬಾರದು?

ಶ್ರೀ ಬಿ. ಶಿವಣ್ಣ :– ಖಾಯಂ ಆಗಿ ಅಪಾಯಿಂಟ್‌ಮೆಂಟ್ ಮಾಡುತ್ತಿದ್ದೇವೆ. ಎಲ್ಲಿಯೂ ತೊಂದರೆ ಇದೆ ಎಂದು ಕಂಡುಬಂದಿಲ್ಲ. ತೊಂದರೆ ಇದೆ ಎಂದು ಹೇಳಿದರೆ ವ್ಯವಸ್ಥೆ ಮಾಡುತ್ತೇವೆ. ಟೆಂಪರರಿಯಾಗಿ ಮಾತ್ರ ಅಪಾಯಿಂಟ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಮಾನ್ಯ ಸಚಿವರು ಎಲ್ಲಿಯೂ ತೊಂದರೆ ಇಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು ಆ ರೀತಿ ಹೇಳಬಾರದು. ಇವತ್ತು ತಾವು ನನ್ನ ಜೊತೆ ಬನ್ನಿ; ನಮ್ಮಲ್ಲಿರತಕ್ಕ 4–5 ಹಾಸ್ಟೆಲ್‌ಗಳಲ್ಲಿ 2–3 ಕಡೆ ಅಡಿಗೆ ಮಾಡುವವರು 3 ಜನರು ಇರುವ ಕಡೆ ಒಬ್ಬರೂ ಇಲ್ಲ. 8–10 ಲಕ್ಷ ರೂಪಾಯಿಗಳನ್ನು ಕೊಟ್ಟು ವಸತಿ ನಿಲಯಗಳನ್ನು ಕಟ್ಟಿಸಿದ್ದರೂ ಅಲ್ಲಿ ವಿದ್ಯಾರ್ಥಿಗಳಿಗೆ ಊಟದ ಅನುಕೂಲತೆ ಇಲ್ಲದೆ ಅಲ್ಲಿ ವಿದ್ಯಾರ್ಥಿಗಳು ಇಲ್ಲ. ದಯವಿಟ್ಟು ಇದನ್ನು ಮಂತ್ರಿಗಳು ಪರಿಶೀಲಿಸಬೇಕು. ಅಲ್ಲಿದ್ದವರನ್ನು ತಾತ್ಪೂರ್ತಿಕವಾಗಿ ಮುಂದುವರಿಸಿ ಹಾಸ್ಟೆಲ್‌ಗಳನ್ನು ನಡೆಸುವ ವ್ಯವಸ್ಥೆ ಮಾಡಬೇಕು.

ಶ್ರೀ ಗೋಪಿನಾಥ ಆರ್. ಸಾಂಡ್ರ :– ಹಾಸ್ಟೆಲ್ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ ಈ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೀರೋ ಇಲ್ಲವೋ? ಹೀಗೆ ಬಿಟ್ಟರೆ ಸರ್ಕಾರದವರು ಕೊಡತಕ್ಕ ಲಕ್ಷಗಟ್ಟಲೆ ಹಣ ವ್ಯರ್ಥವಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸರಿಯಾಗಿ ನಡೆಯುವುದಿಲ್ಲ. ಇದನ್ನು ಲಘುವಾಗಿ ತೆಗೆದುಕೊಳ್ಳದೆ ಬೇಗನೆ

ಖಾಯಂ ಆಗಿ ಜವಾಬ್ದಾರಿ ಹೊರುವಂತಹ ನೌಕರರನ್ನು ನೇಮಕ ಮಾಡಬೇಕು. ದಯವಿಟ್ಟು ಜವಾಬ್ದಾರಿಯುತ ನೌಕರರನ್ನು ಖಾಯಂ ಆಗಿ ನೇಮಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಶ್ರೀಮತಿ ಮೋಟಮ್ಮ :– ಈ ಸಮಸ್ಯೆ ರಾಜ್ಯದ ಎಲ್ಲೆಡೆ ಇದೆ. ನಮ್ಮಲ್ಲೂ ಪೋಸ್ಟ್‌ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ಅಡಿಗೆ ಮತ್ತು ಬೇರೆ ಕೆಲಸಕ್ಕೆ ಜನ ಇಲ್ಲ. ಇವತ್ತಿನ ದಿವಸ ಆರೋಗ್ಯ ಮತ್ತು ವಿದ್ಯಾ ಇಲಾಖೆಗಳಿಗೆ ಎಕಾನಮಿ ಮೆಜರ್ ಅನ್ನು ಲಿಫ್ಟ್ ಮಾಡಿ ಯಾವ ರೀತಿ ಬೇಕಾದ ನೌಕರರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೋ ಅದೇ ಆದೇಶವನ್ನು ಸಮಾಜ ಕಲ್ಯಾಣ ಇಲಾಖೆಗೂ ಅನ್ವಯವಾಗುವಂತೆ ಮಾಡಿ ಹಾಸ್ಟೆಲ್‌ಗಳಲ್ಲಿ ಯಾವ ಯಾವ ವೇಕೆನ್ಸಿ ಇದೆ ಅದನ್ನು ಭರ್ತಿ ಮಾಡುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡಬಾರದು? ಈ ಬಗ್ಗೆ ಮಂತ್ರಿಗಳು ಏಕೆ ಪ್ರಯತ್ನಿಸಬಾರದು?

ಶ್ರೀ ಎಂ.ಪಿ. ಪೆಂಕಟೇಶ್ :– ಎಲ್ಲಿ ತೊಂದರೆ ಇದೆ ಅಲ್ಲಿ ವ್ಯವಸ್ಥೆ ಮಾಡುತ್ತೇವೆ ಅನ್ನುತ್ತಾರೆ ಮಂತ್ರಿಗಳು. ಇರುವವರನ್ನು ಖಾಯಂ ಮಾಡುವುದಿಲ್ಲ, ಬೇರೆಯವರನ್ನು ತೆಗೆದುಕೊಳ್ಳುವುದಿಲ್ಲ. ಹೇಗೆ ಸರಿ ಮಾಡುತ್ತಾರೆಂದು ಅರ್ಥವಾಗುವುದಿಲ್ಲ. ರಾಜ್ಯದಲ್ಲಿ ಎಲ್ಲಾ ಕಡೆ ತೊಂದರೆ ಇದೆ. ನಮ್ಮ ಕ್ಷೇತ್ರದಲ್ಲೂ ತೊಂದರೆ ಇದೆ. ಹರಿಜನ ಗಿರಿಜನರ ಹಾಸ್ಟೆಲಿನಲ್ಲಿ ಇಬ್ಬರು ಇರಬೇಕಾದ ಜಾಗದಲ್ಲಿ ಒಬ್ಬರೇ ಕೆಲಸದವರು ಇದ್ದಾರೆ. ಸರಿ ಮಾಡುತ್ತೇವೆಂದರೆ ಬೇರೆ ಇಲಾಖೆಯಿಂದ ತರುತ್ತೀರಾ? ಅಡಿಗೆಯವರನ್ನು ಇಲ್ಲಿಂದ ಅಲ್ಲಿಗೆ ಬದಲಾಯಿಸುತ್ತೀರಾ? ಅಪಾಯಿಂಟ್ ಮಾಡುವುದಕ್ಕಾಗುವುದಿಲ್ಲವೆಂದರೆ ನನಗಂತೂ ಅರ್ಥವಾಗುವುದಿಲ್ಲ. ಪರಿಶೀಲನೆ ಮಾಡುತ್ತೇವೆಂದರೆ ಯಾವ ರೀತಿ ಮಾಡುತ್ತೀರೆಂದು ಅರ್ಥವಾಗುವುದಿಲ್ಲ.

ಶ್ರೀ ಶ್ರೀಧರ್ ಎಸ್. ಜೋಷಿ :– ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಅದು ಸಾಧ್ಯವಿಲ್ಲ. In every taluka and in every place this difficulty is there. If the Hon'ble Minister says that we will try. I should say it is an irresponsible answer and therefore definite step has to be taken.....

ಶ್ರೀ ಬಿ. ಶಿವಣ್ಣ :– ಇದು ಇವತ್ತಿನದಲ್ಲ. ಐದಾರು ವರ್ಷಗಳಿಂದ ಇದೆ. ನಾನು ಬಂದಮೇಲೆ ಫೈನಾನ್ಸ್ ಮಿನಿಸ್ಟರ್, ಚೀಫ್ ಮಿನಿಸ್ಟರ್ ಜೊತೆ ಮಾತನಾಡಿ ಪರ್ಮನೆಂಟ್ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಡೈಲಿ ವೇಜಸ್‌ನವರೂ ಇದ್ದಾರೆ. ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುವವರು ಕಂಟಿನ್ಯೂ ಆಗಿದ್ದಾರೆ. ಆದ್ದರಿಂದ ಏನೂ ತೊಂದರೆ ಇಲ್ಲ.

(ಒಟ್ಟಿಗೆ ಹಲವಾರು ಸದಸ್ಯರು ಮಾತನಾಡುತ್ತಿದ್ದರು. ಗೊಂದಲಮಯ ವಾತಾವರಣ ಇತ್ತು.)

ಶ್ರೀ ಎಸ್.ಎಚ್. ಕೌಜಲಗಿ :– ಎಸ್.ಸಿ.ಎಸ್.ಟಿಗಳ ಬಗ್ಗೆ ಬಹಳ ಮಾತನಾಡುತ್ತಾರೆ.

ಶ್ರೀ ಬಿ. ಶಿವಣ್ಣ :– ಡೈಲಿ ವೇಜಸ್‌ನಲ್ಲಿ ಕೆಲಸ ಮಾಡುವವರನ್ನು ತೆಗೆದಿಲ್ಲ. ಅವರು ಮುಂದುವರೆಯುತ್ತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಸರ್ಕಾರದಿಂದ ಆಜ್ಞೆ ಬಂದಿದೆ. ಎಲ್ಲರನ್ನೂ ತೆಗೆದಿದ್ದಾರೆ. ತೆಗೆದಿರುವವರನ್ನು ವಾಪಸ್ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಶಿವಣ್ಣ :– 1984 ಕ್ಕಿಂತ ಮೊದಲು ಯಾರಿದ್ದರು ಅವರನ್ನು ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ತೆಗೆಯುವುದಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ :– ಯಾರಿದ್ದರು ಅವರನ್ನು ಕಂಟಿನ್ಯೂ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆರ್ಡರ್ ಇದೆ. ತೆಗೆಯಬೇಕು ಎಂದು ಇಲ್ಲ.

(ಉತ್ತರ ಇಲ್ಲ)

ಉಪಾಧ್ಯಕ್ಷರು :– ಮಾನ್ಯ ಆರ್.ಎನ್. ನಾಯಕ್ ಅವರು.